ಶ್ರೀ ಕೆ. ಹನುಮಂತಯ್ಯನವರು.—ಈ ಮೆಡಲ್‌ಗಳನ್ನು ಕೊಡುವುದು ಸಾಧ್ಯವೇ ಮತ್ತು ಸೂಕ್ತವೇ ಎಂಬ ವಿಷಯಗಳ ಬಗ್ಗೆ ಪತ್ರವ್ಯವಹಾರ ನಡೆಯುತ್ತಿದೆ.

ಶ್ರೀ ಜಿ. ಶಿವಪ್ಪನವರು.—ಕಾಂಗ್ರೆಸ್ ಸರ್ಕಾರ ಬಂದ ಮೇಲೆಯೂ ಈ ರೀತಿ ಅನೇಕಾವೃತ್ತಿ ಮೆಡಲ್‌ಗಳನ್ನು ಕೊಟ್ಟಿಲ್ಲವೇ?

ಶ್ರೀ ಕೆ. ಹನುಮಂತಯ್ಯನವರು.—ನನಗೇನೂ ಕೊಟ್ಟಿಲ್ಲ. (ನಗು).

ಶ್ರೀ ಜಿ. ಶಿವಪ್ಪನವರು.—ಇದಕ್ಕೆ ರಾಜ್ಯಾಂಗದ 18ರ ಪ್ರಕಾರ ತೊಂದರೆ ಬರುವುದಿಲ್ಲವೆಂಬ ವಿಷಯವನ್ನು ಪ್ರಸ್ತಾಪಿಸಿ ಪತ್ರ ವ್ಯವಹಾರ ಮಾಡುತ್ತಿದ್ದೀರಾ?

ಶ್ರೀ ಕೆ. ಹನುಮಂತಯ್ಯನವರು.—ತಮ್ಮ ಪ್ರಶ್ನೆ ಅರ್ಥವಾಗಲಿಲ್ಲ.

ಶ್ರೀ ಜಿ. ಶಿವಪ್ಪನವರು.—ಈಗ ಪತ್ರವ್ಯವಹಾರ ನಡೆಸುತ್ತಿರುವುದು ಯಾವ ಕಾರಣದ ಮೇಲೆ?

**Sri K. HANUMANTHAIYA.**—I did not understand the Hon'ble Member clearly.

**Mr. SPEAKER**.—There is the answer in (a).

## Persons and Associations to whom Loans were granted during 1947-52.

Q. 208.—**Sri. S. GOPALA GOWDA** (Sagar-Hosanagar).—

Will the Government be pleased to state:—

whether they will furnish the list of persons and associations districtwise who have been granted loans by them during the years 1947—52, and the amount of loan which is still outstanding against each grantee and to what purpose?

A.—**Sri. K. HANUMANTHAIYA** (Chief Minister).—

Information is being collected.

ಶ್ರೀ ಎಸ್. ಗೋಪಾಲಗೌಡರು.—ಈ ವಿವರ ಸಂಗ್ರಹಣೆಗೆ ಎಷ್ಟು ಕಾಲ ಹಿಡಿಯಬಹುದು?

ಶ್ರೀ ಕೆ. ಹನುಮಂತಯ್ಯನವರು.—ಅದಕ್ಕೆ ಸ್ವಲ್ಪ ಕಾಲ ಹಿಡಿಯುತ್ತದೆ. ನಾನು ಮತ್ತೊಂದು ಪ್ರಶ್ನೆಯ ಸಂದರ್ಭದಲ್ಲಿ ಉತ್ತರ ಕೊಟ್ಟ ಹಾಗೆ, ನನ್ನ ಉದ್ದೇಶವಾದರೂ ಇದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನು ಕೊಡಕೂಡದು ಅಥವಾ ತಡಮಾಡಬೇಕು ಎಂಬುದಲ್ಲ. ಅಲ್ಲದೆ, ಯಾರ್ಯಾರ ಮೇಲೆ ಸಾಲದ ಬಾಕಿಯಿದೆಯೋ, ಆ ಸಾಲದ ಬಾಕಿಗಳನ್ನೆಲ್ಲಾ ಅವುಗಳ ಷರತ್ತುಗಳೇನಿದೆ ಆ ಷರತ್ತುಗಳ ಪ್ರಕಾರ ವಸೂಲು ಮಾಡಬೇಕೆಂದು ಈಗಾಗಲೇ ಹುಕುಂ ಜಾರಿ ಮಾಡಿದೆ.

ಶ್ರೀ ಎಸ್. ಗೋಪಾಲಗೌಡರು.—ಈ ಅಧಿವೇಶನ ಮುಗಿಯುವುದರೊಳಗೇ ಆ ವಿವರಗಳನ್ನು ಸಂಗ್ರಹಣೆ ಮಾಡಿಕೊಡುತ್ತೀರಾ?

ಶ್ರೀ ಕೆ. ಹನುಮಂತಯ್ಯನವರು.—ಪ್ರಯತ್ನಮಾಡುತ್ತೇವೆ.

## D. D. T. Spraying in Belur, Saklespur and Alur Taluks.

Q.—71. **Sri B. N. BORANNA GOWDA** (Belur).—

Will the Government to pleased to state:—

(a) whether it is a fact that Belur, Saklespur and Alur Taluks are included under health units;

(b) in how many villages of these taluks D.D.T. is not being sprayed;

(c) in how many villages of Yeslur Hobli in Saklespur Taluk D.D.T. is being sprayed;

(d) the expenditure required to spray D.D.T. in places where there are no hospitals in these three taluks?

A.—**Sri T. CHANNIAH** (Minister for Public Health and Local Self-Government.—

(a) No, except for some parts.

(b) 301.

(c) 23.

(d) Twelve more Health Units will have to be started to cover the remaining portions in these three taluks, each Health Units costing Rs. 17,973 4/5 and the total cost of the scheme will be Rs. 3,05,685 3/5.

ಶ್ರೀ ಬಿ. ಎನ್. ಬೋರಣ್ಣಗೌಡರು.—ಬೇಲೂರು, ಸಕಲೇಶಪುರ ಮತ್ತು ಆಲೂರು ಈ ಮೂರು ತಾಲ್ಲೂಕುಗಳನ್ನೂ ಮಲೆನಾಡು ತಾಲ್ಲೂಕುಗಳೆಂದು ಗಣನೆಮಾಡಿಲ್ಲವೆ?

ಶ್ರೀ ಟಿ. ಚನ್ನಯ್ಯನವರು.—ಗಣನೆಮಾಡಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಮಿಕ್ಕ ಎಲ್ಲಹಳ್ಳಿಗಳಲ್ಲಿಯೂ ಡಿ.ಡಿ.ಟಿ ಸ್ಪ್ರೇ ಮಾಡುವುದು ಸರ್ಕಾರದ ಕರ್ತವ್ಯವಲ್ಲವೆ?

ಶ್ರೀ ಟಿ. ಚನ್ನಯ್ಯನವರು.—ಮಾಡಬೇಕೆಂಬುದು ಯೋಚನೆಯಲ್ಲಿದೆ.

ಶ್ರೀ ಬಿ. ಎನ್. ಬೋರಣ್ಣಗೌಡರು.—ಹೀಗೆ ಎಷ್ಟು ಹಳ್ಳಿಗಳಲ್ಲಿ ಸ್ಪ್ರೇ ಮಾಡಬೇಕೆಂದು ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯನವರು.—ನೋಟೀಸು.

ಶ್ರೀ ಬಿ. ಎನ್. ಬೋರಣ್ಣಗೌಡರು.—ಇಲ್ಲಿ ಕೊಟ್ಟಿರುವ ಉತ್ತರದಲ್ಲಿ 301 ಹಳ್ಳಿಗಳಲ್ಲಿ ಮಾಡುತ್ತಿಲ್ಲವೆಂದು ತಿಳಿಸಿದೆ. ಇದು ಸರಿಯೆಂದು ಪರಿಗಣಿಸುತ್ತೀರಾ?

ಶ್ರೀ ಟಿ. ಚನ್ನಯ್ಯನವರು.—ಅದು ಅಭಿಪ್ರಾಯದ ಮಾತು.